5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ಮಂಗಳೂರು–ಬೆಂಗಳೂರು ಸಂಪರ್ಕದ ರಾಷ್ಟ್ರೀಯ ಹೆದ್ದಾರಿಯ ಶಿರಾಡಿ ಘಾಟ್ ಸಮಸ್ಯೆ ಕುರಿತು.

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ ರಾಷ್ಟ್ರೀಯ ಹೆದ್ದಾರಿ–48 ಕಿ.ಮೀ. 28.30 (ನೆಲಮಂಗಲ) ರಿಂದ ಕಿ.ಮೀ. 347.80 (ಮಂಗಳೂರು) ಒಟ್ಟು 320.00 ಕಿ.ಮೀ. ಇರುತ್ತದೆ. ಈ ರಸ್ತೆ ಹಾಸನ, ಸಕಲೇಶಪುರ, ಶಿರಾಡಿಘಾಟ್, ಉಪ್ಪಿನಂಗಡಿ ಮಾರ್ಗವಾಗಿ ಹಾದು ಹೋಗುತ್ತದೆ. ರಾಷ್ಟ್ರೀಯ ಹೆದ್ದಾರಿ 48ರ ಕಿ.ಮೀ. 216 ರಿಂದ 263 ಕಿ.ಮೀ. ವರೆಗಿನ ಭಾಗವನ್ನು ಶಿರಾಡಿ ಘಾಟ್ ರಸ್ತೆಯೆಂದು ಪರಿಗಣಿಸಿದ್ದು ಈ ರಸ್ತೆಯು ಕಡಿದಾದ ತಿರುವಿನಿಂದ ಕೂಡಿರುತ್ತದೆ. ಸದರೀ ರಸ್ತೆಯಲ್ಲಿ ಭಾರಿ ವಾಹನಗಳ ಸಂಚಾರ ಮತ್ತು ಅತೀ ಹೆಚ್ಚಿನ ಮಳೆಯಿಂದಾಗಿ ಹಾಗೂ ನೆಲದಲ್ಲಿನ ನೀರಿನ ಒರತೆಯಿಂದಾಗಿ (Artesan condition) ರಸ್ತೆಯು ಪದೇ ಪದೇ ಮಳೆಗಾಲದಲ್ಲಿ ಹಾಳಾಗುತ್ತಿರುತ್ತದೆ. ಸದರಿ ರಸ್ತೆಯಲ್ಲಿ ಕಳೆದ 5–6 ವರ್ಷಗಳಿಂದ ಯಾವುದೇ ದುರಸ್ತಿ ಕಾರ್ಯ ಕೈಗೊಳ್ಳದೇ ಇದ್ದುದರಿಂದ ರಸ್ತೆಯು ತೀವ್ರತರವಾಗಿ ಹಾಳಾಗಿದ್ದು, ಈ ರಸ್ತೆಯನ್ನು 2013–14ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಅನುದಾನದಿಂದ ಗುಂಡಿ ರಹಿತ ರಸ್ತೆಯನ್ನಾಗಿ ನಿರ್ವಹಣೆ ಮಾಡಲಾಗಿದೆ.

ಈ ರಸ್ತೆಯನ್ನು ಈ ರೀತಿ ನಿರ್ವಹಣೆ ಮಾಡಿದ ನಂತರ ಪ್ರತಿ ನಿತ್ಯವೂ ಭಾರಿ ವಾಹನ ಸಂಚಾರದಿಂದಾಗಿ ಹಾಗೂ ಚಾಲಕರ ಅನಿಯಮಿತ ಚಾಲನೆಯಿಂದಾಗಿ ಪದೇ ಪದೇ ಅಪಘಾತ ಉಂಟಾಗುತ್ತಿರುತ್ತದೆ. ಸದರಿ ರಸ್ತೆಯಲ್ಲಿ ಶಾಶ್ವತವಾಗಿ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕಾಗಿದ್ದು ಈ ಕ್ರಮಗಳನ್ನು ಸದರಿ ರಸ್ತೆಯಲ್ಲಿ ಈಗಾಗಲೇ ಅಭಿವೃದ್ಧಿಗಾಗಿ ಮಂಜೂರಾಗಿರುವ ಈ ಕೆಳಕಂಡ 2 ಕಾಮಗಾರಿಗಳನ್ನು ಕೈಗೆತ್ತಿಕೊಂಡು

ರಸ್ತೆಯನ್ನು ವಾಹನ ಸಂಚಾರಕ್ಕಾಗಿ ಸುರಕ್ಷತಾ ರಸ್ತೆಯನ್ನಾಗಿ ಮಾಡಲು ಸರ್ವ ರೀತಿಯ ಅಭಿವೃದ್ಧಿ ಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಅನುಮೋದನೆಯಾಗಿರುವ ಅಭಿವೃದ್ಧಿ ಕಾಮಗಾರಿಗಳು:

1. ರಾಹೆ–48 ಕಿ.ಮೀ. 237.00 ರಿಂದ 250.620 ರವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕಾಗಿ (13.62 ಕಿ.ಮೀ) ಮಂಜೂರಾದ ಅಂದಾಜು ಮೊತ್ತ ₹ 69.90 ಕೋಟಿ ಕೇಂದ್ರ ಭೂಸಾರಿಗೆ ಸಚಿವಾಲಯದಿಂದ ಮಂಜೂರಾತಿ ಪಡೆಯಲಾಗಿದೆ. ಸದರಿ ಕಾಮಗಾರಿಯನ್ನು ಮೆ: ಓಷನ್ ಕನ್‌ಷ್ಟಷನ್ ಇಂಡಿಯಾ ಪ್ರವೇಟ್ ಲಿಮಿಟೆಡ್, ಮಂಗಳೂರು (M/s Ocean Construction India Pvt. Ltd., Mangalore) ಇವರಿಗೆ ಟೆಂಡರ್ ಆಧಾರದಲ್ಲಿ ವಹಿಸಲಾಗಿದ್ದು ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳ ಸಂಗ್ರಹಣೆ ಕಾರ್ಯ ಪ್ರಗತಿಯಲ್ಲಿರುತ್ತದೆ.

2. ರಾಷ್ಟ್ರೀಯ ಹೆದ್ದಾರಿ–48 ಕಿ.ಮೀ. 216.00 ರಿಂದ 237.00 ಬಲಪಡಿಸುವ ಕಾಮಗಾರಿಗೆ ಹಾಗೂ ಕಿ.ಮೀ. 250.62 ರಿಂದ 263.00ರವರೆಗೆ ಕಾಂಕ್ರೀಟ್ ರಸ್ತೆ ನಿರ್ವಿಸುವ ಕಾಮಗಾರಿಗೆ ₹ 85.28 ಕೋಟಿಗೆ ಕೇಂದ್ರ ಭೂಸಾರಿಗೆ ಸಚಿವಾಲಯದಿಂದ ಮಂಜೂರಾತಿ ಪಡೆಯಲಾಗಿದೆ. ಸದರಿ ಕಾಮಗಾರಿಗೆ EPC ಮಾದರಿಯಲ್ಲಿ ಕಾಮಗಾರಿಯನ್ನು ನಿರ್ವಯಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 19.07.2014 ಆಗಿರುತ್ತದೆ.

ಮೇಲ್ಕಂಡ ಎರಡು ಕಾಮಗಾರಿಗಳ ಅನುಷ್ಠಾನ ಸಮಯದಲ್ಲಿ ಈ ರಸ್ತೆಯ ಸುರಕ್ಷತಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈ ಎರಡು ಕಾಮಗಾರಿಗಳನ್ನು

ಟೆಂಡರ್‌ನಲ್ಲಿ ನಿಗಧಿಪಡಿಸಿರುವ ಕಾಲಾವಧಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಶಾಶ್ವತ ಕಾಮಗಾರಿ:

ಜಪಾನ್ ಅಂತರರಾಷ್ಟ್ರೀಯ ಸಹಯೋಗದ ಏಜೆನ್ಸಿ (JICA) ಶಿರಾಡಿ ಘಾಟಿಗೆ ಹಸಿರು ಬೈಪಾಸ್ ಯೋಜನೆಯನ್ನು ಪ್ರಸ್ತುತ ಪಡಿಸಿದ್ದು, 7.7 ಕಿ.ಮೀ. ಉದ್ದದ ಒಟ್ಟು ಸುರಂಗಮಾರ್ಗ 3.90 ಕಿ.ಮೀ. ಉದ್ದದ High Arch Bridge ಹಾಗೂ 6.9 ಕಿ.ಮೀ. ಉದ್ದದ ರಸ್ತೆ ಸೇರಿದಂತೆ ಒಟ್ಟಾರೆ 18.5 ಕಿ.ಮೀ. ಉದ್ದದ ಹಸಿರು ಬೈಪಾಸ್‌ನ್ನು ₹ 2200.00 ಕೋಟಿ ಅಂದಾಜು ಮೊತ್ತದಲ್ಲಿ JICA ಸಹಯೋಗದೊಂದಿಗೆ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಸದರಿ ಕಾಮಗಾರಿಗೆ ಈಗಾಗಲೇ "Feasibility for tunnel construction at Shiradi-Ghat Section from Km. 238.00 to 261.45 of NH–48" ಟೆಂಡರ್ ಕರೆಯಲಾಗಿದೆ.

ತಾತ್ಕಾಲಿಕ ಕ್ರಮಗಳು:

ಶಿರಾಡಿ ಘಾಟ್ ಭಾಗದಲ್ಲಿ ಮಳೆಗಾಲದಲ್ಲಿ ಅಪಘಾತಗಳು ಉಂಟಾಗಿ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಲ್ಲಿ ಅದನ್ನು ತೆರವುಗೊಳಿಸಲು ಮತ್ತು ರಸ್ತೆ ಮೇಲೆ ಮರದ ಕೊಂಬೆ ಬಿದ್ದಲ್ಲಿ ಅದನ್ನು ತೆಗೆಯಲು ಮತ್ತು ದೊಡ್ಡ ಗುಂಡಿ ಉಂಟಾದಲ್ಲಿ ಅದನ್ನು ಜೆಲ್ಲಿ ಮತ್ತು ಜೆಲ್ಲಿ ಪುಡಿಯಿಂದ ತುಂಬಲು ಎರಡು ಜೆ.ಸಿ.ಬಿ. ಯಂತ್ರವನ್ನು, ಒಂದು ಟ್ರಾಕ್ಟರ್‌ವನ್ನು ಮತ್ತು 15 ಜನ ಕೂಲಿ ಆಳುಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ ತಾತ್ಕಾಲಿಕ ವ್ಯವಸ್ಥೆಗಾಗಿ ನಿಯೋಜಿಸಲಾಗಿದೆ. ಮುಂದುವರೆದು, ಸಂಚಾರಿ ಪೊಲೀಸ್ ಪಹರೆ ಏರ್ಪಡಿಸಲು ಗೃಹ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುವುದು.

ಉಪಾಧ್ಯಕ್ಷರು:– ಇದರಲ್ಲಿ clarification ಗೆ ಅವಕಾಶವಿಲ್ಲ.

ಶ್ರೀ ವಿ. ಸುನೀಲ್ ಕುಮಾರ್:– ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು clarification ಕೇಳುತ್ತೇನೆ. ಈಗಾಗಲೇ concrete ರಸ್ತೆ ನಿರ್ಮಿಸಲು tender ಕರೆಯಲಾಗಿದೆ ಎಂದು ಹೇಳಿದಿರಿ. ಈ ಕಾಮಗಾರಿ ಪ್ರಾರಂಭವಾಗಿ ಎಷ್ಟು ದಿವಸದಲ್ಲಿ ಮುಗಿಸುತ್ತೀರಿ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಇದರ ಜೊತೆಗೆ ಈ ಕಾಮಗಾರಿ ಪ್ರಾರಂಭಿಸುವ ಸಂದರ್ಭದಲ್ಲಿ ಇಡೀ road ನ್ನು block ಮಾಡುತ್ತೀರಾ? ಆ road ನ್ನು block ಮಾಡಿದಾಗ ಪರ್ಯಾಯ ವ್ಯವಸ್ಥೆ ಏನು? ಇನ್ನೊಂದು ತಾತ್ಕಾಲಿಕ ಕ್ರಮಗಳೆಂದು ಹೇಳಿದಿರಿ. ನಾವು ಆ road ನಲ್ಲಿ ದಿನನಿತ್ಯ ಓಡಾಡುವಂಥವರು. ನಮಗೆ major ಸಮಸ್ಯೆ ಏನೆಂದರೆ, ಹಾಸನ ಮತ್ತು ಮಂಗಳೂರು ಈ ಎರಡೂ ಜಿಲ್ಲೆಯ ವ್ಯಾಪ್ತಿಯಲ್ಲಿ ಈ ರಸ್ತೆ ಬರುವುದರಿಂದ ಎರಡು ಜಿಲ್ಲೆಯ DC or SP ಯವರ ಜೊತೆಗೆ co-ordination ಇಲ್ಲ. ಇದರ ಪರಿಣಾಮವಾಗಿ road block ಆದರೆ ನಾವು ಬೆಂಗಳೂರಿಗೆ ಮಧ್ಯಾಹ್ನ 1 ಗಂಟೆ ಬಂದು ತಲುಪುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಎರಡೂ ಜಿಲ್ಲೆಯ co-ordination ದೃಷ್ಟಿಯಿಂದ ಏನು ವ್ಯವಸ್ಥೆ ಮಾಡಿದ್ದೀರಿ ಎನ್ನುವುದನ್ನು ಸ್ಪಷ್ಟ ಮಾಡಿ.

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):– ಸದರಿ ಕಾಮಗಾರಿ ಮಾಡುವಾಗ ಕನಿಷ್ಠ ಎರಡು ರಸ್ತೆಯನ್ನು ಬಂದ್ ಮಾಡಬೇಕಾಗುತ್ತದೆ. ಈಗಾಗಲೇ ಹಿಂದಿನ ಭೂ ಸಾರಿಗೆ ಸಚಿವರಾದ ಮಾನ್ಯ ಆಸ್ಕರ್ ಫರ್ನಾಂಡಿಸ್‌ರವರ ಜೊತೆಗೆ ಮಂಗಳೂರಿನಲ್ಲಿ ಈ ಬಗ್ಗೆ meeting ಮಾಡಿ ಅಲ್ಲಿ ಚರ್ಚೆ ಮಾಡಿ, ಕಾಮಗಾರಿ ಪ್ರಾರಂಭಿಸುವುದಕ್ಕೆ ಮೊದಲೇ ಅದಕ್ಕೆ ಅಗತ್ಯವಿರುವ ಸಾಮಗ್ರಿಗಳನ್ನು ತ್ವರಿತಗತಿಯಲ್ಲಿ ಸಂಗ್ರಹಿಸುವುದಕ್ಕೆ they have started now. 20 ತಿಂಗಳಲ್ಲಿ ಕೆಲಸ ಮುಗಿಸಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ. ಅದನ್ನು stipulated time ನಲ್ಲಿ ಕಾಮಗಾರಿ ಮಾಡಿ

ಮುಗಿಸುತ್ತೇವೆ. ಪರ್ಯಾಯ ವ್ಯವಸ್ಥೆ ಮಾಡಲಿಕ್ಕೆ ಪಕ್ಕದಲ್ಲಿ ಮಾಡುವುದರ ಕೊತೆಗೆ ಈ session ಮುಗಿಯುವುದರೊಳಗಡೆ ಮಂಗಳೂರು ಮತ್ತು ಹಾಸನ ಜಿಲ್ಲಾಧಿಕಾರಿಗಳನ್ನು ಕರೆದು ಅಲ್ಲಿ ವಾಹನ ಸಂಚಾರಕ್ಕೆ ಅನಾನುಕೂಲವಾಗದ ರೀತಿಯಲ್ಲಿ ಪರ್ಯಾಯ ಮಾರ್ಗಗಳು ಸೇರಿದಂತೆ ಕೂಡ ನಾವು ಕೂಲಂಕಷವಾಗಿ ಚರ್ಚಿಸಿ ಅದಕ್ಕೆ ಅನುವು ಮಾಡಲಿಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ.

ಶ್ರೀ ವಿ. ಸುನೀಲ್ ಕುಮಾರ್:– ಇನ್ನೊಂದು ವಿಚಾರ ಪ್ರತಿ ಮಳೆಗಾಲದಲ್ಲಿ ಹಿಂದೆ DC ಯವರು bullet truck ಗಳಿಗೆ ರಾತ್ರಿ ಸಂಚಾರ ನಿಷೇಧಿಸುತ್ತಿದ್ದರು. ಸಂಜೆ 6 ರಿಂದ ಬೆಳಿಗ್ಗೆ 6 ರವರೆಗೆ gas tanker ಗಳನ್ನು ನಿಷೇಧಿಸುತ್ತಿದ್ದರು. ಅದನ್ನು ಏನಾದರೂ ಈ ವರ್ಷ ಮಾಡುತ್ತೀರಾ? ಅದನ್ನು ಮಾಡಿದರೆ ಅರ್ಧ traffic avoid ಮಾಡಲಿಕ್ಕೆ ಅನುಕೂಲವಾಗುತ್ತದೆ ಎನ್ನುವುದು ಹಿಂದಿನಿಂದಲೂ ಬಂದಿರುವ ಪದ್ಧತಿ, ಹೀಗಾಗಿ ಈ ವರ್ಷ ಏಕೆ ಅದನ್ನು ಮಾಡಿಲ್ಲ?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):– ಅಲ್ಲಿ ಸಂಚಾರಕ್ಕೆ ತೊಂದರೆಯಾಗದ ರೀತಿಯಲ್ಲಿ ಏನೇನು possibilities ಇವೆ, ಆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ session ಮುಗಿಯುವುದರೊಳಗೆ ಮಂಗಳೂರು ಮತ್ತು ಹಾಸನ ಜಿಲ್ಲಾಧಿಕಾರಿಗಳನ್ನು ಕರೆದು ನಮ್ಮ ಇಲಾಖೆಯ ಮುಖ್ಯಸ್ಥರನ್ನು ಕರೆದು we will take action.

ಉಪಾಧ್ಯಕ್ಷರು:– ಆಯಿತು. ಈಗ ರಾಜಣ್ಣನವರು ಮಾತನಾಡಿ.